**ಪಿ ಆ್ಯಂಡ್ ಎಸ್ ನಂಃ 05/2023**

**ಪಿಡಬ್ಲ್ಯು - 1 ದೀಪ್ತಿ ಘೋರ್ಪಡೆ**

**ಸಾಕ್ಷಿಯನ್ನು ದಿನಾಂಕಃ 20.06.2025 ರಂದು ಕರೆಯಿಸಿ, ಪ್ರಮಾಣೀಕರಿಸಲಾಯಿತು.**

ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಸ್ ಆರ್ ಜಿ ಎಚ್ ರವರಿಂದಃ

1. ನಾನು ಈ ಅರ್ಜಿಯನ್ನು ತುಳಜಾಭವಾನಿ ದೇವಸ್ಥಾನದ ತುಳಜಾಪೂರದ ವಾರ್ಷಿಕ ಉತ್ಪನ್ನದಲ್ಲಿ2 ಆಣೆ ಹಿಸ್ಸೆ ಮತ್ತು ನರೇಗಲ್ TAPCMF ರವರಿಂದ ಹಣ ಬರಬೇಕಾಗಿರುತ್ತದೆ ಆ ಸಂಬಂದ ಸಲ್ಲಿಸಿರುತ್ತೇನೆ. ನಾನು ತುಳಜಾಭವಾನಿ ಟ್ರಸ್ಟನಿಂದ ಮತ್ತು ನರೇಗಲ್ TAPCMF ನಿಂದ ಎಷ್ಟೆಷ್ಟು ಹಣ ಬರಬೇಕಾಗಿತ್ತು ಎಂದು ನಿರ್ದಿಷ್ಟವಾಗಿ ಹೇಳಿರುವುದಿಲ್ಲ. TAPCMF ಮತ್ತು ಟ್ರಸ್ಟನಿಂದ ಕುಟುಂಬ ಜೀವಂತ ಸದಸ್ಯರ ಪ್ರಮಾಣ ಪತ್ರ ತಂದು ಹಾಜರು ಪಡಿಸಬೇಕೆಂದು ನೀಡಿರುವ ದಾಖಲೆಯನ್ನು ನಾನು ಹಾಜರು ಪಡಿಸಿಲ್ಲ.

2. ಸದರಿ TAPCMF ಮತ್ತು ತುಳಜಾಭವನಿ ಟ್ರಸ್ಟರವರನ್ನು ಅರ್ಜಿಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಎದುರುದಾರರಿಂದ ಎಷ್ಟೇಷ್ಟು ಹಣ ಬರಬೇಕಾಗಿರುತ್ತದೆ ಎಂದು ಕಾಣಿಸಿಲ್ಲ. ನಿಪಿ - 12 ರ ಮೂಲ ಪ್ರತಿ 1ನೇ ಎದುರುದಾರರ ಬಳಿ ಇರುತ್ತದೆ. ನಿಪಿ - 12 ಮೂಲ ಪ್ರತಿ 1ನೇ ಎದುರುದಾರರ ಬಳಿ ಇರುತ್ತದೆ ಎಂದು ಅರ್ಜಿಯಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿರುವುದಿಲ್ಲ. ಸದರಿ ನಿಪಿ - 12 ನ್ನು ಮೂಲ ದಾಖಲೆಯನ್ನು ತೋರಿಸಿ ನೋಟರಿ ಮಾಡಿಸಿರುತ್ತಾರೋ ಇಲ್ಲವೋ ಎಂದು ನನ್ನ ತಂದೆಗೆ ಗೊತ್ತಿದೆ ನನಗೆ ಗೊತ್ತಿಲ್ಲ. ನಿಪಿ - 13 ರಂತೆ ಭಾಷಾಂತರಗೆಳಿಸಿದವರ ಪ್ರಮಾಣ ಪತ್ರವನ್ನು ಸಲ್ಲಿಸಿಲ್ಲ. ಎದುರುದಾರ ನಂ. 1 ಮತ್ತು 2 ರವರಿಂದ ನಮಗೆ ಯಾವುದೇ ರೀತಿಯ ಹಣ ಬರುವುದು ಬಾಕಿ ಇರುವುದಿಲ್ಲಎಂದರೆ ಸರಿಯಲ್ಲ. ಎದುರುದಾರರ ವಿರುದ್ಧ ಈ ಅರ್ಜಿಯನ್ನು ಸಲ್ಲಿಸಲು ಬರುವುದಿಲ್ಲ, ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಅದೆ.

**-SD-**

ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.